

## ಲವ್ ಆಲ್...

ನನ್ನ ಮಗ ತೇಜಸ್ವಿಗೆ ಐದೂವರೆ ವರ್ಷ. ಮನೆ ಎದುರಿನ ರಸ್ತೆಯಲ್ಲಿ ಅವನ ಅಪ್ಪ ಹಾಗೂ ಅವರ ಸ್ನೇಹಿತ ಶಟಲ್ ಬ್ಯಾಡ್ಮಿಂಟನ್ ಆಡುತ್ತಿರುವುದನ್ನು ಗಮನಿಸುತ್ತಿರುತ್ತಾನೆ. ಹಾಗಾಗಿ ಶಟಲ್‌ನ ಅಂಕಗಳು ಆತನಿಗೆ ಗೊತ್ತು. ಅದೊಂದು ದಿನ ಆತ 'ಲವ್ ಆಲ್, ಲವ್ ಆಲ್', 'ಒನ್ ಲವ್... ಒನ್ ಲವ್' ಎಂದು ಜೋರಾಗಿ ಅಂಕಗಳನ್ನು ಹೇಳುತ್ತಿದ್ದ. ಅಷ್ಟರಲ್ಲಿ ಆತನ ಅಜ್ಜಿ ಅವನನ್ನು ಮನೆಯೊಳಗೆ ಕರೆದು ಗದರಲಾರಂಭಿಸಿದರು. ಆತ ತನಗೇಕೆ ಗದರುತ್ತಿದ್ದಾರೆಂದು ಅರಿಯದೆ ಕಕ್ಕಾಬಿಕ್ಕಿಯಾಗಿದ್ದ.
ನಾನು ವಿಷಯವೇನೆಂದು ಅತ್ತೆಯಲ್ಲಿ ಕೇಳಿದೆ.
'ಇವನು ಅಲ್ಲಿ ರಸ್ತೆಯಲ್ಲಿ ಅಷ್ಟು ಜೋರಾಗಿ ಲವ್ ಲವ್ ಅಂತ ಕಿರುಚುತ್ತಾ ಇದ್ದಾನೆ' ಎಂದು ಹೇಳಿದರು. ನನಗೆ ಒಮ್ಮೆಗೆ ನಗು ಬಂತು. ಅವರಿಗೆ ನಾನು 'ಶಟಲ್ ಅಂಕದಲ್ಲಿ ಸೊನ್ನೆಗೆ ಲವ್ ಎನ್ನುತ್ತಾರೆ. ಅಂಕದಲ್ಲಿ ಮೊದಲಿಗೆ ಲವ್ ಆಲ್ ಎಂದೇ ಶುರು ಮಾಡುತ್ತಾರೆ' ಎಂದು ವಿವರಿಸಿ ಹೇಳಿದೆ. ಅವರೂ ನಕ್ಕುಬಿಟ್ಟರು.

**ಗಾಯತ್ರಿ ನಾಯಕ್**

## 'ಮೆಟ್ ಕೊಡೆ'

ನನ್ನ ಮೈದುನ ಕೃಷ್ಣ ಸ್ವಲ್ಪ ಗಡಿಬಿಡಿ ಸ್ವಭಾವದವನು. ಮುಂಗೋಪಿ ಬೇರೆ. ಅವನ ಗಡಿಬಿಡಿಯಿಂದ ಆಗೋ ಅಚಾತುರ್ಯಕ್ಕೆ ನಾವು ನಕ್ಕರೆ, ಅವನಿಗೆ ಸಿಟ್ಟು ಬಂತೆಂದೇ ಲೆಕ್ಕ. ಅದರ ಫಲವಾಗಿ ಅವನ ಹೆಂಡತಿ ಮೇಲೆ ರೇಗಾಟ. ನಮಗಿದೆಲ್ಲ ಅಭ್ಯಾಸವಾಗಿದೆ. ಕಳೆದ ವಾರ ಮನೆಯಲ್ಲಿ ಸಣ್ಣ ಕಾರ್ಯಕ್ರಮವಿತ್ತು. ಎಲ್ಲರೂ ಸೇರಿದ್ದೆವು. ನನ್ನ ವಾರಗಿತ್ತಿ ಪೇಟೆಯಿಂದ ಏನೋ ಸಾಮಾನು ತರಲು ಪದೆ ಪದೇ ಹೇಳಿದಳು. ಸಿಟ್ಟಾದ ನನ್ನ ಮೈದ ಸ್ಕೂಟಿ ಏರಿ ಹೊರಟೇ ಬಿಟ್ಟ. ಹಾಗೇ ತಿರುಗಿ ಬಂದು ಮಗಳಿಗೆ 'ಏಯ್ ಚಿನ್ನೂ ಮೆಟ್ ಕೊಡೆ' ಎಂದು ಕೂಗಿದ. ತಕ್ಷಣ ನಮ್ಮ ವಿಶು(ನಾದಿನಿ ಮಗ) ಅವನ ಒಂದು ಜತೆ ಚಪ್ಪಲಿ ಹಿಡಿದು ಕೊಡಲು ಹೋದ. ನನ್ನ ಮೈದುನನ ಸಿಟ್ಟೆಲ್ಲ ಜರ್ರನೆ ಇಳಿದು, 'ಅಪ್ಪಾ ದೊರೆ ಹೆಲ್ಮೆಟ್ ಅಪ್ಪ ನಾನು ಕೇಳಿದ್ದು' ಎಂದು ನಾಟಕೀಯವಾಗಿ ಕೈಮುಗಿದ. ಆ ಸಂದರ್ಭ ಎಲ್ಲರೂ ಹೊಟ್ಟೆ ಹುಣ್ಣಾಗುವಂತೆ ನಕ್ಕಿದ್ದೆವು.

**'ಸುಮಾ ಕಳಸಾಪುರ'**

